

ಎಲ್ಲಿಂದ ಅಂತ ಮಾಡಿದ್ರಿ?...' ಅದೇನು ಹೊಸದಲ್ಲ ಅನ್ನೋ ತರ ಹೇಳಿದರು. ತಾನು ಬರೀ ಕೆಲಸಕ್ಕೆ ಹೋಗೋದು ಬರೋದರಲ್ಲೆ ಕಳೆದೆನಾ, ಮನೇಲಿದ್ದು ಇವಳು ಸುತ್ತಮುತ್ತೆಲ್ಲಾ ಅಭ್ಯಾಸ ಮಾಡಿ ಲೋಕಜ್ಞಾನ ಗಳಿಸಿದಳಾ ಅಂತ ಬೆರಗಿಗೆ ಬಿದ್ದರು.

'ಅವರೂ ಬದುಕೋಕೆ ಏನಾದ್ರು ಮಾಡಬೇಕು ತಾನೆ? ನಿಮಗೆ ಗೊತ್ತಾ? ಶಹರದ ದೊಡ್ಡದೊಡ್ಡ ಮಿಠಾಯಿ ಮಳಿಗೆಗಳಿಗೆ ನಾನಾಥರ ಸಿಹಿ ತಯಾರಾಗೋದು ಇಂತಲ್ಲೆ. ಪಲಾವು, ಪುಳಿಯೋಗರೆ ಇಂತಹ ಜಾಗದಲ್ಲೆ ಕಡಾಯಿ ತುಂಬ ಮಾಡಿ ಪಾರ್ಟಿಗಳಿಗೆ ಸರಬರಾಜಾಗೋದು. ದೊಡ್ಡದೊಡ್ಡ ಕಂಪನಿಗಳ ಏಸಿ ರೂಮುಗಳಲ್ಲಿ ದೀಪಾವಳಿ ಗಿಫ್ಟ್ ಕೊಡತಾರಲ್ಲ ಆ ಆಕರ್ಷಕ ಪ್ಯಾಕಿಂಗ್ ನಡೆಯೋದು ಎಲ್ಲಿ ಅಂತ ಮಾಡಿದ್ರಿ ನೀವು?' ದೋಸೆ ಮಗುಚಿ ಹಾಕುತ್ತಿದ್ದವರು ಏನೋ ನೆನಪಾದವರಂತೆ ತಿರುಗಿ, 'ಅದ್ಯಾರೋ ಟ್ರಸ್ಟಿನವರು ಫೋನು ಮಾಡಿದ್ರು. ಪುಸ್ತಕಗಳ ಬಗ್ಗೆ ವಿಚಾರಿಸಿದ್ರು... ಮುಗಿಸಿ ಕೊಡಬಾರದಾ?' ಅಂದಾಗ ದೀನಪ್ರಸಾದರಿಗೆ ಕಸಿವಿಸಿಯಾಯ್ತು.

ಪೇಪರು ಓದಲು ಸುರುಮಾಡಬೇಕೆನ್ನುವಾಗ ಕಣ್ಣು ಅಯಾಚಿತವಾಗಿ ಮೇಜಿನತ್ತ ಚಲಿಸಿ ಅವಲೋಕಿಸುವಾಗ ಫೋನು ಬಂತು. '...ಸಾರ್ ನೀವು ವಾಕಿಂಗ್ ಹೋಗಿದ್ರಂತೆ, ಮೊಬೈಲನ್ನು ಮೇಡಮ್ ರಿಸೀವ್ ಮಾಡಿದ್ರು. ಅದೇ ಸರ್... ಸಮಾರಂಭ ಎರಡುಸಾರಿ ಮುಂದೆ ಹಾಕಿದ್ವಿ, ಒತ್ತಡ ಸುರುವಾಗಿದೆ. ಆಯ್ಕೆಯಾಗಿದ್ರೆ ಕಳಿಸಿಕೊಡಿ ಅಂತ ಕೇಳಕೊಳೋಕೆ ಫೋನ್ ಮಾಡಿದ್ವಿ...' ಮುಜುಗರದಲ್ಲಿ ಇನ್ನೂ ತೆರೆಯದ ಕಟ್ಟುಗಳತ್ತ ದೃಷ್ಟಿ ಹಾಯಿತು. '...ಅದೆಲ್ಲಾ ಆಗಿದೆ. ಬೇರೆ ಸಾಹಿತ್ಯಿಕ ಕೆಲಸಗಳ ಒತ್ತಡದಲ್ಲಿದ್ದೆ, ಕಳಸೋಕಾಗಲಿಲ್ಲ, ಎರಡುದಿನದಲ್ಲಿ ಕಳಿಸತೀನಿ, ಏನೂ ಚಿಂತೆ ಪಡಬೇಡಿ, ತಯಾರಿ ಮಾಡಿಕೊಳ್ಳಿ' ಅನ್ನುತ್ತ ಫೋನಿಟ್ಟರು. ತಮಗೆ ಬಂದು ಎರಡು ತಿಂಗಳ ಮೇಲೇ ಆಗಿರಬಹುದು ಅನ್ನುವುದು ಕಿರಿಕಿರಿಯೆನಿಸಿ, ಪೇಪರನ್ನು ಪಕ್ಕಕ್ಕಿಟ್ಟು ಪುಸ್ತಕದ ಒಂದು ಕಟ್ಟನ್ನು